National
Kannada
09.02.2025: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

**1.** ಐದು ದಿನಗಳ ಜಾಗತಿಕ ವೈಮಾನಿಕ ಪ್ರದರ್ಶನ ಏರೋ ಇಂಡಿಯಾಗೆ ಬೆಂಗಳೂರು ಸಜ್ಜು; ರಕ್ಷಣಾ ಸಚಿವ ರಾಜನಾಥ್ ಸಿಂಗ್ ನಾಳೆ ಚಾಲನೆ

**2.** ನಾಳೆಯಿಂದ ಪ್ಯಾರೀಸ್‌ನಲ್ಲಿ ಎರಡು ದಿನಗಳ ಕೃತಕಬುದ್ಧಿಮತ್ತೆ ಶೃಂಗಸಭೆ; ಸಹ ಅಧ್ಯಕ್ಷತೆ ವಹಿಸಲಿರುವ ಪ್ರಧಾನಿ ನರೇಂದ್ರ ಮೋದಿ

**3.** ಮಹಾಕುಂಭಮೇಳದಲ್ಲಿ ಇಂದಿನಿಂದ ಮೂರು ದಿನಗಳ ಅಂತಾರಾಷ್ಟ್ರೀಯ ಪಕ್ಷಿಗಳ ಉತ್ಸವ

**4.** ಪ್ಯಾರಾ ಆರ್ಚರಿ ಏಷ್ಯಾಕಪ್; ಎರಡು ಸ್ವರ್ಣ ಗೆದ್ದ ಭಾರತದ ಆಟಗಾರರು

***********

ಏಷ್ಯಾದ ಅತಿದೊಡ್ಡ ಏರ್ ಶೋ - ಏರೋ ಇಂಡಿಯಾ ೨೦೨೫ರ ೧೫ನೇ ಆವೃತ್ತಿಯು ಬೆಂಗಳೂರಿನ ಯಲಹಂಕದ ವಾಯುಪಡೆ ನಿಲ್ದಾಣದಲ್ಲಿ ನಾಳೆಯಿಂದ ಆರಂಭವಾಗಲಿದೆ.ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್, ನಾಳೆ ವೈಮಾನಿಕ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಈ ನಡುವೆ ಬೆಂಗಳೂರಿನಲ್ಲಿ ಏರ್ ಶೋ ಹಿನ್ನೆಲೆಯಲ್ಲಿ ವ್ಯಾಪಕ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.ಕಾರ್ಯಕ್ರಮದ ಮೊದಲ ಮೂರು ದಿನಗಳು ವಾಣಿಜ್ಯ ವ್ಯವಹಾರದ ದಿನಗಳಾಗಿದ್ದು, ೧೩ ಮತ್ತು ೧೪ ರಂದು ಪ್ರದರ್ಶನವನ್ನು ಸಾರ್ವಜನಿಕರು ವೀಕ್ಷಿಸಲು ಅನುವು ಮಾಡಿಕೊಡಲಾಗಿದೆ. ಏರ್ ಶೋ ಹಿನ್ನೆಲೆಯಲ್ಲಿ ಈಗಾಗಲೇ ಲೋಹದ ಹಕ್ಕಿಗಳು ತಾಲೀಮು ನಡೆಸುತ್ತಿವೆ.

***********

ಪ್ಯಾರೀಸ್‌ನಲ್ಲಿ ನಾಳೆಯಿಂದ ಎರಡು ದಿನಗಳ ಕೃತಕಬುದ್ಧಿಮತ್ತೆ ಕುರಿತಾದ ಶೃಂಗಸಭೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಜಾಗತಿಕ ಕೃತಕಬುದ್ಧಿಮತ್ತೆ ವಲಯದ ನಾಯಕರು, ಕೈಗಾರಿಕಾ ವಲಯದ ದಿಗ್ಗಜರು, ಸಂಶೋಧಕರು ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಮಹತ್ವದ ಶೃಂಗಸಭೆಯಲ್ಲಿ ಭಾಗಿಯಾಗಲು ಪ್ರಧಾನಿ ನರೇಂದ್ರ ಮೋದಿ ನಾಳೆ ಪ್ಯಾರೀಸ್‌ಗೆ ಪ್ರಯಾಣ ಬೆಳೆಸಲಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರಾನ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಶೃಂಗಸಭೆಯ ಸಹ ಅಧ್ಯಕ್ಷತೆ ವಹಿಸಲಿದ್ದಾರೆ.ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ನೈತಿಕ ಜವಾಬ್ದಾರಿತನ ಮೂಡಿಸುವ ಜೊತೆಗೆ ನಾವೀನ್ಯತೆ ಮತ್ತು ಸೂಕ್ತ ಜಾಗತಿಕ ನೀತಿ - ನಿರೂಪಣೆಗಳನ್ನು ರೂಪಿಸುವ ಕುರಿತು ಮಹತ್ವದ ಸಮಾಲೋಚನೆ ನಡೆಯಲಿದೆ. ನೂರಕ್ಕೂ ಹೆಚ್ಚು ದೇಶಗಳಿಂದ ಸಂಶೋಧಕರು, ವ್ಯಾಪಾರ ಕ್ಷೇತ್ರದ ನಾಯಕರು, ನಾಗರಿಕ ಸಮಾಜದ ಸದಸ್ಯರು ಈ ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ.ಕೃತಕ ಬುದ್ಧಿಮತ್ತೆಯಿಂದ ಆಡಳಿತ, ಆರ್ಥಿಕತೆ ಮತ್ತು ಮೂಲಭೂತ ಹಕ್ಕುಗಳ ಮೇಲಾಗುವ ಪರಿಣಾಮಗಳ ಕುರಿತು ಚರ್ಚೆ ನಡೆಯಲಿದೆ.

***********

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದ ಅಂಗವಾಗಿ ಇಂದಿನಿಂದ ಮೂರು ದಿನಗಳ ಅಂತಾರಾಷ್ಟ್ರೀಯ ಪಕ್ಷಿಗಳ ಉತ್ಸವ ಆಯೋಜಿಸಲಾಗಿದೆ.ಪರಿಸರ ಸಂರಕ್ಷಣೆ ಹಾಗೂ ಜೀವವೈವಿಧ್ಯತೆ ರಕ್ಷಿಸುವ ಉದ್ದೇಶದಿಂದ ಈ ಪಕ್ಷಿ ಹಬ್ಬ ಆಚರಿಸಲಾಗುತ್ತಿದೆ. ನಿಸರ್ಗ ಪ್ರೇಮಿಗಳು, ಪಕ್ಷಿಪ್ರಿಯರು, ಯಾತ್ರಾರ್ಥಿಗಳು ಅಮೂಲ್ಯವಾದ ಹಾಗೂ ಅಪರೂಪದ ಪಕ್ಷಿಗಳನ್ನು ವೀಕ್ಷಿಸಲು ಇದು ಸದಾವಕಾಶವಾಗಿದೆ.ಈ ಸಂದರ್ಭದಲ್ಲಿ ಛಾಯಚಿತ್ರ ಪ್ರದರ್ಶನ, ಕಲಾರಚನೆ, ಪರಿಸರ ಸಂರಕ್ಷಣೆ ಕುರಿತಾದ ಧ್ಯೇಯವಾಕ್ಯಗಳನ್ನು ಬರೆಯುವ, ಚರ್ಚಾ ಸ್ಪರ್ಧೆ ಹಾಗೂ ರಸಪ್ರಶ್ನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಜೊತೆಗೆ ದೇಶ-ವಿದೇಶಗಳ ಪರಿಸರ ತಜ್ಞರು ಪರಿಸರ ಸಂರಕ್ಷಣೆ ಕುರಿತು ತಮ್ಮ ಒಳನೋಟವನ್ನು ಹಂಚಿಕೊಳ್ಳಲಿದ್ದಾರೆ ಎಂದು ಉತ್ತರಪ್ರದೇಶ ಅರಣ್ಯ ಇಲಾಖೆಯ ಮಾಹಿತಿ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಅಲೋಕ್ ಕುಮಾರ್ ಪಾಂಡೆ ತಿಳಿಸಿದ್ದಾರೆ.

***********

ಯುವ ಸಮೂಹ ಪುಸ್ತಕಗಳ ಅಧ್ಯಯನಕ್ಕೆ ಆದ್ಯತೆ ನೀಡುವ ಮೂಲಕ ಜ್ಞಾನಾಧಾರಿತ ಮಾರ್ಗ ಕಂಡುಕೊಳ್ಳಬೇಕು. ಜ್ಞಾನ, ಶಕ್ತಿ ಮತ್ತು ಸ್ಫೂರ್ತಿಗಾಗಿ ಪುಸ್ತಕಗಳತ್ತ ಆಸಕ್ತರಾಗುವಂತೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಕರೆ ನೀಡಿದ್ದಾರೆ. ನವದೆಹಲಿಯಲ್ಲಿ ನಡೆಯುತ್ತಿರುವ ವಿಶ್ವ ಪುಸ್ತಕ ಮೇಳ ೨೦೨೫ ರಲ್ಲಿ ಎರಡು ಪುಸ್ತಕಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ವೈಯಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ಪುಸ್ತಕಗಳು ನಿಜವಾದ ಮಾರ್ಗದರ್ಶಕ ಶಕ್ತಿಯಾಗಿವೆ. ಪುಸ್ತಕಗಳು ಜ್ಞಾನದ ಶಾಶ್ವತ ದಾಖಲೆಗಳಾಗಿವೆ. ಭವಿಷ್ಯದ ಪೀಳಿಗೆಗೆ ವಿಚಾರಗಳು ಮತ್ತು ಪರಂಪರೆಯನ್ನು ಪುಸ್ತಕಗಳು ತಂದಿವೆ ಸಂರಕ್ಷಿಸುತ್ತವೆ.  ಸವಾಲುಗಳನ್ನು ನಿವಾರಿಸಲು ಸ್ಫೂರ್ತಿ, ಪ್ರೇರಣೆ ಮತ್ತು ಶಕ್ತಿಯ ಮೂಲವಾಗಿ ಪುಸ್ತಕಗಳನ್ನು ಅಳವಡಿಸಿಕೊಳ್ಳಬೇಕು ಎಂದರು.ನವದೆಹಲಿಯ ಭಾರತ್ ಮಂಟಪಮ್‌ನಲ್ಲಿ ನಡೆಯುತ್ತಿರುವ ೫೨ನೇ ಆವೃತ್ತಿಯ ವಿಶ್ವ ಪುಸ್ತಕ ಮೇಳ ಇಂದು ಸಂಪನ್ನಗೊಳ್ಳಲಿದೆ.

ಈ ಕುರಿತು ಒಂದು ವರದಿ..

ಧ್ವನಿ: ವರದಿಗಾರರು

***********

ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ಆಮ್ ಆದ್ಮಿ ಪಕ್ಷದ ಅತಿಶಿ ರಾಜೀನಾಮೆ ನೀಡಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಉಂಟಾದ ಸೋಲಿನ ಕಾರಣದಿಂದ ಅತಿಶಿಯವರು ತಮ್ಮ ರಾಜೀನಾಮೆ ಪತ್ರವನ್ನು ಉಪರಾಜ್ಯಪಾಲ ವಿ.ಕೆ.ಸಕ್ಸೇನಾ ಅವರಿಗೆ ಸಲ್ಲಿಸಿದ್ದಾರೆ.ಕಳೆದ ವರ್ಷ ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ್ ಕೇಜ್ರಿವಾಲ್ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದ ನಂತರ ಅತಿಶಿ ದೆಹಲಿಯ ಚುಕ್ಕಾಣಿ ಹಿಡಿದಿದ್ದರು.ಈ ಮಧ್ಯೆ ಏಳನೇ ದೆಹಲಿ ವಿಧಾನಸಭೆಯನ್ನು ನಿನ್ನೆಯಿಂದ ಜಾರಿಗೆ ಬರುವಂತೆ ಉಪರಾಜ್ಯಪಾಲ ವಿನಯ್ ಕುಮಾರ್ ಸಕ್ಸೇನಾ ವಿಸರ್ಜಿಸಿದ್ದಾರೆ.ದೆಹಲಿ ವಿಧಾನಸಭೆಯಲ್ಲಿ ಬಿಜೆಪಿ ೪೮ ಕ್ಷೇತ್ರಗಳಲ್ಲಿ ಹಾಗೂ ಆಮ್ ಆದ್ಮಿ ಪಕ್ಷ ೨೨ ಸ್ಥಾನಗಳಲ್ಲಿ ಗೆಲುವು ಸಾಧಿಸಿವೆ.

***********

ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರತಿವರ್ಷವೂ, ಪರೀಕ್ಷೆಗಳನ್ನು ಎದುರಿಸುವ ಕುರಿತಂತೆ ವಿದ್ಯಾರ್ಥಿಗಳೊಂದಿಗೆ ನಡೆಸುವ ಸಂವಾದ ಕಾರ್ಯಕ್ರಮ ಪರೀಕ್ಷಾ ಪೇ ಚರ್ಚಾ ನಾಳೆ ಬೆಳಗ್ಗೆ ೧೧ ಗಂಟೆಗೆ ಜರುಗಲಿದೆ. ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಸಂವಾದದಲ್ಲಿ ಪಾಲ್ಗೊಳ್ಳಲಿದ್ದು, ಈ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ, ಪರೀಕ್ಷಾ ಸಿದ್ಧತೆ, ಒತ್ತಡ ನಿರ್ವಹಣೆ ಮತ್ತು ವೈಯಕ್ತಿಕ ಬೆಳವಣಿಗೆ ಕುರಿತಂತೆ ಚರ್ಚೆ ನಡೆಸಲಿದ್ದಾರೆ. ಈ ವರ್ಷ ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಿಂದ ೩೬ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಇವರಲ್ಲಿ ಕಲಾ ಉತ್ಸವ ಮತ್ತು ವೀರ ಗಾಥಾ ಕಾರ್ಯಕ್ರಮದ ವಿಜೇತರೂ ಸೇರಿದ್ದಾರೆ. ಈ ಬಾರಿಯ ಪರೀಕ್ಷಾ ಪೇ ಚರ್ಚಾ ಹೊಸ ವಿನ್ಯಾಸದೊಂದಿಗೆ ೮ ಸಂಚಿಕೆಗಳಲ್ಲಿ ಮೂಡಿ ಬರುತ್ತಿದೆ. ಪ್ರಧಾನಮಂತ್ರಿಯವರ ಸಂವಾದ ಕಾರ್ಯಕ್ರಮವನ್ನು ದೂರದರ್ಶನ, ಸ್ವಯಂಪ್ರಭ, ಪ್ರಧಾನಮಂತ್ರಿ ಕಾರ್ಯಾಲಯದ ಅಧಿಕೃತ ಯುಟ್ಯೂಬ್ ಚಾನೆಲ್, ಶಿಕ್ಷಣ ಸಚಿವಾಲಯ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಸಾಮಾಜಿಕ ಜಾಲತಾಣಗಳಲ್ಲಿ ನೇರ ಪ್ರಸಾರ ಮಾಡಲಾಗುವುದು. ೨೦೧೮ರಲ್ಲಿ ಆರಂಭವಾದಾಗಿನಿಂದ ಪರೀಕ್ಷಾ ಪೇ ಚರ್ಚಾ ಒಂದು ರಾಷ್ಟ್ರವ್ಯಾಪಿ ಆಂದೋಲನವಾಗಿ ರೂಪುಗೊಂಡಿದೆ. ಅಲ್ಲದೇ ಈ ವರ್ಷದ ಆವೃತ್ತಿ ೫ ಕೋಟಿಗೂ ಹೆಚ್ಚಿನ ಭಾಗವಹಿಸುವಿಕೆ ಮೂಲಕ ಹಿಂದಿನ ಆವೃತ್ತಿಗಳ ದಾಖಲೆಯನ್ನು ಮುರಿದಿದೆ.

***********

ಕೇಮನ್ ದ್ವೀಪ ಸಮೂಹದ ನೈಋತ್ಯ ಭಾಗದ ಕೆರಿಬಿಯನ್ ಸಮುದ್ರದಲ್ಲಿ ನಿನ್ನೆ ೭.೬ ತೀವ್ರತೆಯ ಪ್ರಬಲ ಭೂಕಂಪನ ಸಂಭವಿಸಿದೆ. ಅಮೆರಿಕದ ಭೂಸರ್ವೇಕ್ಷಣಾ ವರದಿ ಪ್ರಕಾರ, ೧೦ ಕಿಲೋಮೀಟರ್ ಆಳದಲ್ಲಿ ಸಂಭವಿಸಿದ ಭೂಕಂಪದ ಕೇಂದ್ರ ಬಿಂದುವು ಕೇಮನ್ ದ್ವೀಪಗಳಲ್ಲಿನ ಜಾರ್ಜ್ ಟೌನ್‌ನಿಂದ ನೈಋತ್ಯಕ್ಕೆ ೨೦೯ ಕಿಲೋಮೀಟರ್ ದೂರದಲ್ಲಿತ್ತು ಎಂದು ವರದಿಯಾಗಿದೆ. ಅಮೆರಿಕದ ರಾಷ್ಟ್ರೀಯ ಸುನಾಮಿ ಎಚ್ಚರಿಕೆ ಕೇಂದ್ರವು ಪೋರ್ಟೋರಿಕೊ ಮತ್ತು ಅಮೆರಿಕ ವರ್ಜಿನ್

ದ್ವೀಪಗಳಿಗೆ ಸುನಾಮಿ ಎಚ್ಚರಿಕೆ ನೀಡಿದೆ ಆದರೆ, ಅಮೆರಿಕದ ಮುಖ್ಯ ಭೂಭಾಗಕ್ಕೆ ಯಾವುದೇ ಸುನಾಮಿ ಬೆದರಿಕೆ ಇಲ್ಲ ಎಂದು ದೃಢಪಡಿಸಿದೆ.

***********

ಈಶಾನ್ಯ ರಾಜ್ಯಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಕಟಿಬದ್ಧವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.ಮೈಸೂರಿನಲ್ಲಿ ನಿನ್ನೆ ಎಬಿವಿಪಿ ರಾಷ್ಟ್ರೀಯ ಏಕಾತ್ಮಕಾ ಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಲ್ಲಿ ಈ ರಾಜ್ಯಗಳ ಶ್ರೇಯೋವೃದ್ಧಿಗೆ ಸುಮಾರು ಐದೂವರೆ ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೊತ್ತವನ್ನು ವೆಚ್ಚಮಾಡಲಾಗಿದೆ ಎಂದರು.

***********

ಥೈಲ್ಯಾಂಡ್‌ನಲ್ಲಿ ನಡೆಯುತ್ತಿರುವ ಪ್ಯಾರಾ ಅರ್ಚರಿ ಏಷ್ಯಾ ಕಪ್‌ನಲ್ಲಿ ಭಾರತೀಯ ಬಿಲ್ಲುಗಾರರು ಇಂದು ರಿಕರ್ವ್ ಓಪನ್ ಮತ್ತು ಕಾಂಪೌಂಡ್ ಓಪನ್ ಮಿಶ್ರ ತಂಡ ಸ್ಪರ್ಧೆಗಳಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಇದರೊಂದಿಗೆ ಭಾರತದ ೪ ಚಿನ್ನ, ಮತ್ತು ೨ ಬೆಳ್ಳಿಯೊಂದಿಗೆ ೦೬ ಪದಕಗಳನ್ನು ಗೆದ್ದಿದೆ.

***********

ಉತ್ತರಾಖಂಡದ ಡೆಹರಾಡೋನ್‌ನಲ್ಲಿ ನಡೆಯುತ್ತಿರುವ ೩೮ ನೇ ರಾಷ್ಟ್ರೀಯ ಕ್ರೀಡಾಕೂಟದ ೧೩ನೇ ದಿನವಾದ ಇಂದು ಪದಕ ಪಟ್ಟಿಯಲ್ಲಿ, ಸರ್ವಿಸಸ್ ೪೨ ಚಿನ್ನದ ಪದಕಗಳೊಂದಿಗೆ ಓಟದಲ್ಲಿ ಅಗ್ರಸ್ಥಾನದಲ್ಲಿದೆ. ಕರ್ನಾಟಕ ೩೦ ಚಿನ್ನದ ಪದಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ ೨೫ ಚಿನ್ನದ ಪದಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ.

***********

ಭಾರತ ಹಾಗೂ ಇಂಗ್ಲೆಂಡ್ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ೨ನೇ ಪಂದ್ಯ ಇಂದು ಕಟಕ್‌ನ ಬಾರಾ ಬಾತಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ ಮಧ್ಯಾಹ್ನ ೧.೩೦ ಕ್ಕೆ ಆರಂಭವಾಗಲಿದೆ.  ನಾಗ್ಪುರದಲ್ಲಿ ನಡೆದ ಮೊದಲ ಏಕದಿನ ಪಂದ್ಯವನ್ನು ನಾಲ್ಕು ವಿಕೆಟ್‌ಗಳಿಂದ ಗೆದ್ದಿರುವ ಭಾರತ, ಸರಣಿ ಕೈವಶ ಮಾಡಿಕೊಳ್ಳುವ ತವಕದಲ್ಲಿದೆ.

***********

ಮುಂಬೈ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತೀಯ-ಡಚ್ ಜೋಡಿಯಾದ ಪ್ರಾರ್ಥನಾ ಥೋಂಬರೆ ಮತ್ತು ಅರಿಯಾನ್ನೆ ಹಾರ್ಟೋನೊ ಇಂದು ನಡೆಯಲಿರುವ ಮಹಿಳಾ ಡಬಲ್ಸ್ ಫೈನಲ್‌ನಲ್ಲಿ ರಷ್ಯಾದ ಜೋಡಿಯಾದ ಅಮಿನಾ ಅನ್ಶ್ಬಾ ಮತ್ತು ಎಲೆನಾ ಪ್ರಿಡಂಕಿನಾ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಸಂಜೆ ೫ ಗಂಟೆಗೆ ಆರಂಭವಾಗಲಿದೆ. ಕಳೆದ ವರ್ಷದ ಪ್ರಶಸ್ತಿ ಪಂದ್ಯದಲ್ಲಿ ಸೋತಿದ್ದ ಥೋಂಬರೆ ಮತ್ತು ಹಾರ್ಟೋನೊ ಫೈನಲ್ ತಲುಪುತ್ತಿರುವುದು ಇದು ಸತತ ಎರಡನೇ ವರ್ಷವಾಗಿದೆ.

***********